

ಎರಡು ಭಾಗಗಳಲ್ಲಿ ತೆರೆಕಂಡು ಗೆಲುವಿನ ದಾಖಲೆ ಬರೆದ ತೆಲುಗಿನ ‘ಬಾಹುಬಲಿ’ಯಂತೆ ಕನ್ನಡದ ‘ಕೆಜಿಎಫ್’ ಸಿನಿಮಾದ ಉತ್ತರಾರ್ಧ ತೆರೆಕಂಡು ಭಾರೀ ಯಶಸ್ಸು ಗಳಿಸಿದೆ. ಕೆಜಿಎಫ್ ಹೆಸರಿಗೆ ಈಗಲೂ ಮೌಲ್ಯವಿದೆ ಎನ್ನುವುದಕ್ಕೆ ಸಿನಿಮಾದ ಯಶಸ್ಸು ಉದಾಹರಣೆಯಂತಿದೆ. ಆದರೆ, ಕೆಜಿಎಫ್‌ನ ನೆನಪುಗಳ ಗಣಿಯನ್ನು ಹೊಕ್ಕರೆ ಅಲ್ಲಿ ಚಿನ್ನದ ಹೊಳಪಷ್ಟೇ ಕಾಣಿಸುವುದಿಲ್ಲ, ಬಡ ಕಾರ್ಮಿಕರ ಬಣ್ಣಗೆಟ್ಟ ಬದುಕಿನ ದುರಂತವೂ ಕಣ್ಣಿಗೆ ರಾಚುತ್ತದೆ. ನಾಗರಿಕ ಹಾಗೂ ಬಂಡವಾಳಶಾಹಿ ಸಮಾಜವೊಂದು ಎಸಗಿದ ಅನಾಗರಿಕ ಕೃತ್ಯಗಳು ಕಾಣಿಸುತ್ತವೆ. ಚಿನ್ನ ಎತ್ತುವ ಕ್ರಿಯೆಯಲ್ಲಿ ಬದುಕುಗಳನ್ನೇ ಬರಿದಾಗಿಸಿದ ಇತಿಹಾಸದ ಜೀವಂತಸಾಕ್ಷಿಗಳನ್ನು ಪ್ರತಿನಿತ್ಯ ಬೆಂಗಳೂರು-ಕೆ.ಜಿ.ಎಫ್ ನಡುವೆ ಸಂಚರಿಸುವ ‘ಸ್ವರ್ಣ ಎಕ್ಸ್‌ಪ್ರೆಸ್’ ರೈಲಿನಲ್ಲಿ ಕಾಣಬಹುದು.

■ ಎನ್ ಜಗನ್ನಾಥ ಪ್ರಕಾಶ್